ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ರಾಜ್ಯ ಸರ್ಕಾರದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯು ಹೇಗಿದೆ ಎಂದರೆ, ಮುಖ್ಯವಾದ ಅತ್ಯಗತ್ಯ ವೆಚ್ಚಗಳನ್ನು ಭರಿಸಲು ಸರ್ಕಾರಕ್ಕೆ ಸಾಧ್ಯವಾದರೂ ಸಹ ಅರ್ಥೋಪಾಯ ಸ್ಥಿತಿಯ ಮೇಲೆ ಕಟ್ಟುನಿಟ್ಟಾದ ಎಚ್ಚರ ವಹಿಸುವ ಅಗತ್ಯವಿದೆ.

ಆ) ಇಲ್ಲ

ಇ) ಸದ್ಯದ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿಯಲ್ಲಿ ಶ್ವೇತ ಪತ್ರ ಹೊರಡಿಸುವಿಕೆ ಅನವಶ್ಯಕ.

ಈ) ಮಹಾಲೇಖಪಾಲರು ಪ್ರತಿ ಮಾಸದಲ್ಲಿ ಬರುವ ವಾಸ್ತವಿಕ ಆದಾಯ ಮತ್ತು ಖರ್ಚಿನ ಮಾಸಿಕ ಹಣಕಾಸಿನ ವ್ಯವಹಾರದ ಲೆಕ್ಕಪತ್ರದ ವರದಿಯನ್ನು ನೀಡುತ್ತಾರೆ. ಮಹಾಲೇಖಪಾಲರು ಇತ್ತೀಚೆಗೆ ನೀಡಿರುವ ಹಣಕಾಸಿನ ವ್ಯವಹಾರದ ಲೆಕ್ಕಪತ್ರದ ಮಾಸಿಕ ವರದಿಯು 1992ರ ಸೆಪ್ಟೆಂಬರ್ ತಿಂಗಳಿಗೆ ಸಂಬಂಧಿಸಿರುತ್ತದೆ. ಈ ವರದಿಯ ಪ್ರಕಾರ ರಾಜ್ಯದ ಬೊಕ್ಕಸಕ್ಕೆ 1992ರ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ವಿವಿಧ ಮೂಲಗಳಿಂದ ಬಂದ ಒಟ್ಟು ಆದಾಯ 2465–50 ಕೋಟಿ ರೂ.ಗಳು 1992ರ ನವೆಂಬರ್ ತಿಂಗಳ ಅಂತ್ಯದವರೆಗಿನ ಅಂಕಿ ಅಂಶಗಳು 1993ರ ಜನವರಿ ತಿಂಗಳಿನಲ್ಲಿ ಮಾತ್ರ ದೊರೆಯುತ್ತವೆ.

ಸಂಕಷ್ಟ ಪತ್ರಕರ್ತರಿಗೆ ಮಾಸಿಕ ವೇತನ.

50 (50) ಶ್ರೀ ಎಂ.ವಿ. ವೆಂಕಟಪ್ಪ, (ಮುಳಬಾಗಿಲು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ವಯಸ್ಸಾದ ಕೆಲವು ಪತ್ರಕರ್ತರು ಸಂಕಷ್ಟದಲ್ಲಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಂಕಷ್ಟ ಪತ್ರಕರ್ತರಿಗೆ ಮಾಸಿಕ ವೇತನ ನೀಡುವ ಯಾವುದಾದರೂ ಯೋಜನೆಗಳನ್ನು ಜಾರಿಗೊಳಿಸಲಾಗಿದೆಯೇ;

ಇ) ಇಲ್ಲವಾದರೆ ಸಂಕಷ್ಟ ಸ್ಥಿತಿಯಲ್ಲಿರುವ ಪತ್ರಕರ್ತರಿಗೆ ಮಾಸಿಕ ವೇತನ ನೀಡಲು ಶಿಫಾರಸ್ಸು ಮಾಡಲು ಸರ್ಕಾರ ಒಂದು ಸಮಿತಿಯನ್ನು ರಚಿಸುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ಹೌದು.

ಇ) ಉದ್ಭವಿಸುವುದಿಲ್ಲ. ಸರ್ಕಾರವು ಹಿಂದೆಯೇ ಈ ಬಗ್ಗೆ ಒಂದು ಸಮಿತಿಯನ್ನು ರಚಿಸಿದೆ.

ಕೋಲಾರ ಜಿಲ್ಲೆಯಲ್ಲಿ ಕಪ್ಪು ಹಲಗೆಯ ಅಡಿಯಲ್ಲಿ ನೇಮಿಸಲಾದ ಉಪಾಧ್ಯಾಯರುಗಳು.

51 (52) ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಕಪ್ಪು ಹಲಗೆ ಅಡಿಯಲ್ಲಿ ಬರುವ ಶಾಲೆಗಳಿಗೆ ನೇಮಕ ಮಾಡಬೇಕಿದ್ದ ಉಪಾಧ್ಯಾಯರುಗಳನ್ನು ನೇಮಕ ಮಾಡುವಲ್ಲಿ ವಿಳಂಬವಾಗಲು ಕಾರಣಗಳೇನು;

ಆ) ಅಂತಹ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು;

ಇ) ಆದಷ್ಟು ಬೇಗನೆ ಸದರಿ ಉಪಾಧ್ಯಾಯರುಗಳನ್ನು ನೇಮಕ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಯಾವುದೇ ವಿಳಂಬವಿಲ್ಲ. ಕಪ್ಪುಹಲಗೆ ಕಾರ್ಯಕ್ರಮದ ಮೊದಲನೇ ಹಂತದಲ್ಲಿ 130 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿದೆ. ಕಪ್ಪುಹಲಗೆ 2ನೇ ಹಂತದಲ್ಲಿ 230ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 4ನೇ ಹಂತದಲ್ಲಿ 327 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಕಪ್ಪುಹಲಗೆ ಯೋಜನೆ 3ನೇ ಹಂತದಲ್ಲಿ 175 ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರು ಜಿಲ್ಲೆಯ ನಿಜಗಲ್ಲು ಮತ್ತು ಶಿವಗಂಗೆಯ ಸಮೀಪ ಅನಧಿಕೃತವಾಗಿ ಗ್ರಾನೈಟ್ ತೆಗೆಯುವುದು ಕುರಿತು.

53 (92) ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಬೆಂಗಳೂರು ಜಿಲ್ಲೆಯ ನಿಜಗಲ್ಲು ಮತ್ತು ಶಿವಗಂಗೆಯ ಸಮೀಪ ಅನಧಿಕೃತವಾಗಿ ಗ್ರಾನೈಟ್ ತೆಗೆದು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಈ ಪ್ರಕರಣದಲ್ಲಿ ಸಿಕ್ಕಿಬಿದ್ದ ನೌಕರರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳು;

3. ಈ ಪ್ರದೇಶದಲ್ಲಿನ ಅನಧಿಕೃತ ಗ್ರಾನೈಟ್ ಸಾಗಾಣಿಕೆಯನ್ನು ತಡೆಯುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಇತ್ತೀಚೆಗೆ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1969ಕ್ಕೆ ತಿದ್ದುಪಡಿ ತಂದು ಇದರಲ್ಲಿ ಗ್ರಾನೈಟ್ ಸಾಗಾಣಿಕೆಗೆ, ಸಾಗಾಣಿಕೆ ಪರವಾನಗಿಯನ್ನು ಪಡೆದಿರಲೇಬೇಕೆಂದು ಮತ್ತು ಅನಧಿಕೃತ ಗ್ರಾನೈಟ್ ಸಾಗಾಣಿಕೆಗೆ ಪ್ರತಿ ದಿಮ್ಮಿಯ ಮೌಲ್ಯದ ಹತ್ತರಷ್ಟು ಮೊಬಲಗನ್ನು ದಂಡ ತೆರಬೇಕೆಂದು ವಿಧಿಸಿದೆ. ಅಲ್ಲದೆ ವಾಣಿಜ್ಯ ತೆರಿಗೆ, ಸಾರಿಗೆ ಮತ್ತು ಅರಣ್ಯ ಇಲಾಖೆಯ ಚೆಕ್ ಪೋಸ್ಟ್‌ಗಳಲ್ಲಿನ ಅಧಿಕಾರಿಗಳಿಗೂ ಸದ್ರಿ ಚೆಕ್ ಪೋಸ್ಟ್‌ಗಳ ಮೂಲಕ ಹಾದುಹೋಗುವ ಗ್ರಾನೈಟ್ ಸಾಗಿಸುವ ವಾಹನಗಳನ್ನು ತಪಾಸಣೆ ನಡೆಸುವ ಅಧಿಕಾರವನ್ನು ಮೇಲ್ಕಾಣಿಸಿದ ನಿಯಮದಲ್ಲಿ ನೀಡಿದೆ.